ಸಂಪುಟ 01 | ಸಂಚಿಕೆ 139 | ಶನಿವಾರ 25 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಮುಳುಗುವಿಕೆ ತಡೆ ದಿನ (World Drowning Prevention Day)

ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ವಿಶ್ವಸಂಸ್ಥೆ (UN) ಜುಲೈ 25ರಂದು ಈ ದಿನವನ್ನು ಆಚ- ರಿಸುತ್ತವೆ. ಮುಳುಗುವಿಕೆ ಅಪಾಯದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಜೀವ ರಕ್ಷಣೆ ಕ್ರಮಗಳನ್ನು ಉತ್ತೇಜಿಸುವುದು ಇದರ ಉದ್ದೇಶ.

2)ವಿಶ್ವ ಭ್ರೂಣಶಾಸ್ತ್ರಜ್ಞರ ದಿನ (World Embryologist Day)

1978ರ ಜುಲೈ 25ರಂದು ಜಗತ್ತಿನ ಮೊದಲ ಐವಿಎಫ್ ಶಿಶು ಲೂಯಿಸ್ ಬ್ರೌನ್ ಜನಿಸಿದ ದಿನದ ನೆನಪಿಗಾಗಿ ಆಚರಿಸಲಾಗುತ್ತದೆ. ಸಂತಾನೋತ್ಪತ್ತಿ ವೈದ್ಯಕೀಯ ಕ್ಷೇತ್ರದಲ್ಲಿ ಭ್ರೂಣಶಾಸ್ತ್ರಜ್ಞರ ಕೊಡುಗೆಯನ್ನು ಗೌರವಿಸುವ ದಿನ.

## ಸುಭಾಷಿತ

ಯಾರ ಮನಸ್ಸಿನಲ್ಲಿ ನಾನೇ ಸರಿ ಎನ್ನುವುದು ಇರುತ್ತದೆ ಆತನಿಗೆ ತನ್ನ ತಪ್ಪಿನ ಅರಿವಾಗುವುದಿಲ್ಲ.

-ಬುದ್ಧ

# ಪ್ರಶ್ನೆ ಪತ್ರಿಕೆ ಲೀಕ್ ಪ್ರಕರಣದಲ್ಲಿ ಭಾಗಿಯಾದರೆ 1ಕೋಟಿ ರೂ. ದಂಡ, 10 ವರ್ಷ ಕಠಿಣ ಜೈಲು ಶಿಕ್ಷೆ

o **ನೈಜ್ಯ ದೆಸೆ ನ್ಯೂಸ್**

**ನವದೆಹಲಿ: ಸಂಘಟಿತ ಅಪರಾಧದ ಪ್ರಕರಣಗಳಲ್ಲಿ, 5 ರಿಂದ 10 ವರ್ಷಗಳ ಜೈಲು ಶಿಕ್ಷೆ ಮತ್ತು ಕನಿಷ್ಠ 1 ಕೋಟಿ ರೂಪಾಯಿ ದಂಡ ವಿಧಿಸಲಾಗುತ್ತದೆ. ಸಚಿವ ಸಂಪುಟದ ಅನುಮೋದನೆಯ ನಂತರ, ಸೋಮವಾರ ಲೋಕಸಭೆಯಲ್ಲಿ ಈ ತಿದ್ದುಪಡಿ ಮಸೂದೆಯನ್ನು ಮಂಡಿಸುವ ನಿರೀಕ್ಷೆಯಿದೆ.**

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರತಿಭಟನೆ ನಡೆಯುತ್ತಿರುವ ನಡುವೆಯೇ, ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ವಂಚನೆ ವಿರುದ್ಧ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮತ್ತಷ್ಟು ಕಠಿ- ಣಗೊಳಿಸಲು ಕೇಂದ್ರ ಸರ್ಕಾರ ಯೋಜಿಸುತ್ತಿದೆ. ಪ್ರಧಾನಿಯವರ ತಡರಾತ್ರಿಯ ವೀಡಿಯೊ ಸಂದೇಶವು ಹೆಚ್ಚಿನ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಒಂದು ದಿನದ ನಂತರ, ಸರ್ಕಾರವು ಸಾರ್ವಜನಿಕ ಪರೀಕ್ಷೆಗಳು




(ಅನ್ಯಾಯದ ವಿಧಾನಗಳ ತಡೆಗಟ್ಟುವಿಕೆ) ಕಾಯ್ದೆ, 2024 ಕ್ಕೆ ತಿದ್ದುಪಡಿಗಳನ್ನು ತರಲು ಯೋಜಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಶುಕ್ರವಾರ ಮಧ್ಯಾಹ್ನ ನಡೆಯಲಿರುವ ಸಚಿವ ಸಂಪುಟ ಸಭೆಯು ಪ್ರಸ್ತಾವಿತ ತಿದ್ದುಪಡಿಗಳನ್ನು ಅನುಮೋದಿಸುವ ಸಾಧ್ಯತೆಯಿದೆ. ಸಂಭವನೀಯ ಬದಲಾವಣೆಗಳನ್ನು ಪಟ್ಟಿ ಮಾಡುತ್ತಾ, ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳನ್ನು ವಿಚಾರಣೆ ಮಾಡಲು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವ ನಿಬಂಧನೆಯನ್ನು ಕಾನೂನಿಗೆ ಸೇ- ರಿಸಬಹುದು ಎಂದು ಮೂಲಗಳು ತಿಳಿಸಿವೆ.

ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳಿಗೆ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲು ನಿರ್ದೇಶನ ನೀಡಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಬೆಳಿಗ್ಗೆ ಪೋಸ್ಟ್ ಮಾಡಿದ್ದರು. ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಲ್ಲಿ ಭಾಗಿಯಾದವರಿಗೆ ವಿಧಿಸಲಾಗುವ ಜೈಲು ಶಿಕ್ಷೆ ಮತ್ತು ದಂಡದ ಮೊತ್ತವನ್ನು ಹೆಚ್ಚಿಸುವ ನಿಟ್ಟಿನಲ್ಲಿಯೂ ತಿದ್ದುಪಡಿಗಳನ್ನು ತರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದರೆ ವ್ಯಕ್ತಿಗಳಿಗೆ 3 ರಿಂದ 5 ವರ್ಷಗಳ ಜೈಲು ಶಿಕ್ಷೆ ಮತ್ತು 10 ಲಕ್ಷ ರೂಪಾಯಿವರೆಗೆ ದಂಡ ವಿಧಿಸಲಾಗುತ್ತದೆ. ಸಂಭವನೀಯ ಅಪರಾಧದ ಬಗ್ಗೆ ಮಾಹಿತಿ ನೀಡದ ಸೇವಾ ಪೂರೈಕೆದಾರ- ರಿಗೆ ಪ್ರಸ್ತುತ ಕಾನೂನಿನ ಅಡಿಯಲ್ಲಿ 1 ಕೋಟಿ ರೂಪಾಯಿವರೆಗೆ ದಂಡ ವಿಧಿಸಬಹುದು. ಸಂಘಟಿತ ಅಪರಾಧದ ಪ್ರಕರಣಗಳಲ್ಲಿ, 5 ರಿಂದ 10 ವರ್ಷಗಳ ಜೈಲು ಶಿಕ್ಷೆ ಮತ್ತು ಕನಿಷ್ಠ 1 ಕೋಟಿ ರೂಪಾಯಿ ದಂಡ ವಿಧಿಸಲಾಗುತ್ತದೆ. ಸಚಿವ ಸಂಪುಟದ ಅನುಮೋದನೆಯ ನಂತರ, ಸೋಮವಾರ ಲೋಕಸಭೆಯಲ್ಲಿ ಈ ತಿದ್ದುಪಡಿ ಮಸೂದೆಯನ್ನು ಮಂಡಿಸುವ ನಿರೀಕ್ಷೆಯಿದೆ.

ಕಳೆದ 10 ವರ್ಷಗಳಲ್ಲಿ 150 ಬಾರಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ನಡೆದಿವೆ ಮತ್ತು ಅದರಲ್ಲಿ ಯಾರೊಬ್ಬ- ರಿಗೂ ಶಿಕ್ಷೆಯಾಗಿಲ್ಲ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಹೇಳಿದ್ದರು. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶುಕ್ರವಾರದಂದು ಹೆಚ್ಚಿನ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾತ್ರಿ ವಿಡಿಯೋ ಹೇಳಿಕೆಯ ಮೂಲಕ ಭರವಸೆ ನೀಡಿದರು.

## ದೇವದುರ್ಗ ದಲ್ಲಿ ಶನಿವಾರ ಪತ್ರಕರ್ತ ಮೌನೇಶ ಜಾಲಹಳ್ಳಿಗೆ ಪ್ರತಿಷ್ಠಿತ 'ದುರ್ಗದ ಸಿರಿ' ಪ್ರಶಸ್ತಿ ಪ್ರದಾನ

### ಪೆನ್ನಿನ ಶಕ್ತಿ ಹಾಗೂ ಬೀದಿಯ ಹೋರಾಟಗಳ ಮೂಲಕ ಸಮಾಜದ ಧ್ವನಿಯಾದ ಮೌನೇಶ ಜಾಲಹಳ್ಳಿ ಪತ್ರಕರ್ತನಿಗೆ ಗೌರವ

o **ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿದೇವದುರ್ಗ: ಪೆನ್ನಿನ ಶಕ್ತಿ ಹಾಗೂ ಬೀದಿಯ ಹೋರಾಟಗಳ ಮೂಲಕ ಸಮಾಜದಧ್ವನಿಯಾಗಿ ಗುರುತಿಸಿಕೊಂಡಿರುವ ದಿಟ್ಟ ಹೋರಾಟಗಾರ ಹಾಗೂ ಪ್ರಾಮಾಣಿಕ ಪತ್ರಕರ್ತ ಮೌನೇಶ ಜಾಲಹಳ್ಳಿ ಅವರಿಗೆ 2026?27ನೇ ಸಾಲಿನ ಪ್ರತಿಷ್ಠಿತ 'ದುರ್ಗದ ಸಿರಿ' ಪ್ರಶಸ್ತಿ ಲಭಿಸಿದೆ.**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದೇವದುರ್ಗ ತಾಲೂಕು ಘಟಕದ ವತಿಯಿಂದ, ಮಾಜಿ ಸಂಸದ ಬಿ.ವಿ. ನಾಯಕ ಪ್ರಾಯೋಜಿತ *'ಎ. ವೆಂಕಟೇಶ ನಾಯಕ ಸ್ಮಾರಕ ದುರ್ಗದ ಸಿರಿ ಪ್ರಶಸ್ತಿ'*ಯನ್ನು ಜುಲೈ 25ರಂದು (ಶನಿವಾರ) ದೇವದುರ್ಗದ ಶೇಷೇಂದ್ರ ಮುರಿಗೇಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಧಿಕೃತವಾಗಿ ಪ್ರದಾನ ಮಾಡಲಾಗುವುದು. ಬಡತನವನ್ನು ಮೆಟ್ಟಿ ನಿಂತು ಸಾಧನೆಯ ಹಾದಿ ಜೂನ್ 1, 1991ರಂದು ರಂಗಪ್ಪ ಮತ್ತು ಲಲಿತಮ್ಮ ದಾಸರ್ ದಂಪತಿಯ ಕುಟುಂಬದಲ್ಲಿ ಜನಿಸಿದ ಮೌನೇಶ ಜಾಲಹಳ್ಳಿ ಅವರ ಬಾಲ್ಯ ಹಲವು ಸವಾಲುಗಳಿಂದ ಕೂಡಿತ್ತು. ತಂದೆಯ ಅಗಲಿಕೆಯ ಬಳಿಕ ತಾಯಿಯ ಕೂಲಿ ಕೆಲಸವೇ ಕುಟುಂಬಕ್ಕೆ ಆಸರೆಯಾಗಿತ್ತು. ಕಡುಬಡತನದ ನಡುವೆಯೂ ಧೃತಿಗೆಡದೆ ಶಿಕ್ಷಣ ಮುಂದುವರಿಸಿದ ಅವರು ಬಿ.ಎ. ಹಾಗೂ ಬಿ.ಎಡ್. ಪದವಿಗಳನ್ನು ಪೂರ್ಣಗೊಳಿಸಿದ್ದಾರೆ.



ಅವರ ಸಹೋದರ ಬಿ.ಎ. ಪದವಿ ಪೂರ್ಣಗೊಳಿಸಿ ಸ್ವಂತ ಕಂಪ್ಯೂಟರ್ ಅಂಗಡಿ ನಡೆಸುತ್ತಿದ್ದಾರೆ. ತಂಗಿಯೂ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಪೂರ್ಣಗೊಳಿಸಿದ್ದಾರೆ. ಪೆನ್ನು ಮತ್ತು ಪ್ರತಿಭಟನೆಯಸಮ್ಮಿಲನ 'ಬರೆಯುವುದೂ ಒಂದು ಹೋರಾಟ, ಹೋರಾಡುವುದೂ ಒಂದು ಬರಹ' ಎಂಬ ಆಶಯವನ್ನು ಜೀವನದಲ್ಲಿ ಅಳವಡಿಸಿಕೊಂಡಿರುವ ಮೌನೇಶ ಜಾಲಹಳ್ಳಿ ಅವರು ಕಾಲೇಜು ದಿನಗಳಿಂದಲೇ ವಿದ್ಯಾರ್ಥಿಗಳು, ನಿರುದ್ಯೋಗಿಗಳು ಹಾಗೂ ರೈತರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ.

ವಿದ್ಯಾರ್ಥಿಗಳ ಶುಲ್ಕ ಏರಿಕೆ, ಶಿಕ್ಷಣ ನೀತಿ, ರೈತರ ಸಮಸ್ಯೆಗಳು ಸೇರಿದಂತೆ ವಿವಿಧ ಜನಪರ ವಿಚಾರಗಳ ಕುರಿತು ನಿರಂತರವಾಗಿ ಧ್ವನಿಯಾಗಿದ್ದಾರೆ. ಪತ್ರಿಕೋದ್ಯಮದ ಮೂಲಕ ಅನ್ಯಾಯ, ಶೋಷಣೆ ಹಾಗೂ ಜನಸಾಮಾನ್ಯರ ಸಮಸ್ಯೆಗಳನ್ನು ಸಮಾಜದ ಮುಂದಿಡುವುದರ ಜೊತೆಗೆ, ಹೋರಾಟದ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ.

ಗ್ರಾಮೀಣ ಪತ್ರಿಕೋದ್ಯಮ ಹಾಗೂ ಜನಪರ ಹೋರಾಟಗಳಿಗೆ ಸಂದ ಗೌರವವೆಂದೇ ಪರಿಗಣಿಸಲಾಗುತ್ತಿರುವ ಈ ಪ್ರಶಸ್ತಿ, ಮೌನೇಶ ಜಾಲಹಳ್ಳಿ ಅವರ ಸಮಾಜಮುಖಿ ಸೇವೆಗೆ ಮತ್ತಷ್ಟು ಬಲ ನೀಡಲಿದೆ ಎಂದು ಸ್ಥಳೀಯರು ಹಾಗೂ ಹಿತೈಷಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಜು.29 ರಂದು ಸಾಯಿಮಂದಿರದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗುವವು

o **ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ಗುರು ಪೂರ್ಣಿಮೆ ಹಾಗೂ 22 ನೇ ವಾರ್ಶಿಕೋತ್ಸವದ ಅಂಗವಾಗಿ ಪಟ್ಟಣದ ಸತ್ಯನಾರಾಯಣ ಪೇಟೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ. ಜು.29 ರಂದು ವಿಶೇಷ ಪೂಜೆ, ವಿವಿಧ ಧಾರ?ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾಯಿಬಾಬ ಮಂದಿರದ ಪದಾಧಿಕಾ- ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಅಂದು ಬೆಳಿಗ್ಗೆ 5 ಗಂಟೆಗೆ ಸಾಯಿಬಾಬ ಮಂದಿರದಲ್ಲಿ ಕಾಕಡಾರತಿ, ಬೆಳಿಗ್ಗೆ 7 ಗಂಟೆಗೆ ಸಾಯಿಬಾಬ ಅವರ ಅಮೃತಶಿಲೆ ಪ್ರತಿಮೆಗೆ ಸಕಲ ಸದ್ಭಕ್ತರಿಂದ ಕ್ಷೀರಾಭಿಷೇಕ, 12 ಗಂಟೆಗೆ ಅನ್ನಸಂರ?ಪಣೆ,



ಸಂಜೆ 5-30ಕ್ಕೆ ವಿವಿಧ ಸಾಂಸ್ಕೃತಿಕ ಕರ?ಯಕ್ರಮಗಳು ಹಾಗೂ ಸಾಯಿಬಾಬಾ ಚ- ರಿತ್ರೆಯ ನೃತ್ಯ ಸಂಯೋಜನೆ ಕಾಯಕ್ರಮವನ್ನು ಜಿಲಾನಿ ಬಾಷಾರವರ ಶ್ರೀ ನಾಟ್ಯ ಲಕ್ಷ್ಮೀ ಟ್ರಸ್ಟ್ ಕಂಪ್ಲಿ ಇವರಿಂದ ನಡೆಯಲಿದೆ. ಸಂಜೆ 6-15ಕ್ಕೆ ಸಂಧ್ಯಾ ಆರತಿ, 7-15ಕ್ಕೆ ಸಾಯಿಬಾಬಾ ಅವರ ವಿಶೇಷ ಪಲ್ಲಕ್ಕಿ ಉತ್ಸವ ಮತ್ತು ರಾತ್ರಿ 8 ಗಂಟೆಗೆ ಶೇಷ ಆರತಿ ಕರಯಕ್ರಮಗಳು ನಡೆಯಲಿವೆ.

ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಸ್ವಾಮಿವಿವೇಕಾನಂದ ಚಾರಿಟಬಲ್ ರಕ್ತ ಕೇಂದ್ರ ಬಳ್ಳಾರಿ ಇವರ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಇರುತ್ತದೆ, ಯುವಕ, ಯುವತಿಯರು ಸ್ವಯಂ ಪ್ರೇ- ರಿತರಾಗಿ ರಕ್ತದಾನ ಮಾಡುವಂತೆ ಮಂದಿರದ ಪದಾಧಿಕಾರಿಗಳು ಮನವಿ ಮಾಡಿದ್ದರು.

## ಕಾರುಣ್ಯಾಶ್ರಮದ ಡಾ. ಚನ್ನಬಸವ ಸ್ವಾಮಿ ಅವರು ಲೈಫ್ ಅಚೀವ್ ಮೆಂಟ್ ಅವಾರ್ಡ್ ಗೆ ಆಯ್ಕೆ

o **ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀ ಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರ 47ನೇ ಜನ್ಮದಿನ ಆಚರಣೆಯ ಶುಭದಿನದಂದು ಅವರ ಅನಾಥಪರ ಸಮಾಜ ಪರ ನಿರಂತರ ಸೇವಾ ಕಾರ್ಯಗಳನ್ನು ಗುರುತಿಸಿ ತಮಿಳುನಾಡಿನ ಏಷಿಯಾ ಇಂಟರ್ ನ್ಯಾಷನಲ್ ಕಲ್ಚರ್ ರೀಸರ್ಚ್ ಯುನಿವರ್ಸಿಟಿ ಏಶಿಯಾ ಇಂಟರ್ ನ್ಯಾಷನಲ್ ಕಲ್ಚರ್**



**ಅಕಾಡೆಮಿಯಿಂದ ದಿನಾಂಕ -25- 07-2026 ರಂದು ಜರುಗುವ ಕಾರ್ಯಕ್ರಮದಲ್ಲಿ ದಿ ಬೆಸ್ಟ್ "ಲೈಫ್ ಅಚೀವ್ ಮೆಂಟ್ ಅವಾರ್ಡ್ "ಎನ್ನುವ ಶ್ರೇಷ್ಠ ಗೌರವಾನ್ವಿತ ಪ್ರಶಸ್ತಿಯನ್ನು ನಾಡಿನ ಹರ ಗುರು ಚರಮೂರ್ತಿಗಳ ಹಾಗೂ ಗಣ್ಯಾತಿಗಣ್ಯರ ಸಮಕ್ಷಮದಲ್ಲಿ ವಿತರಿಸಿ ಸನ್ಮಾನಿಸಲಾಗುವುದೆಂದು ಸಂಸ್ಥೆಯ ಮುಖ್ಯಸ್ಥರು ಹಾಗೂ ಪದಾಧಿಕಾ- ರಿಗಳು ಮಾಹಿತಿ ನೀಡಿದ್ದಾರೆ.**

**ಈ ಸಮಯದಲ್ಲಿ ಈ ಪ್ರಶಸ್ತಿಗೆ ಭಾಜನರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸುಮಾರು ವರ್ಷಗಳಿಂದ ನಿರಂತರ ದಾನಿಗಳ ಸಹಕಾರದೊಂದಿಗೆ ಕಾರುಣ್ಯ ಕುಟುಂಬದ ನಿರ್ವಹಣೆ ನೆಡೆಯುತ್ತಿದೆ. ಸರ್ಕಾರದ ಯಾವುದೇ ಅನುದಾನವಿಲ್ಲದೇ ಮಾಡುತ್ತಿರುವ ಜನಪರ ಕಾರ್ಯಗಳ ಪುಣ್ಯ ದಾನಿಗಳಿಗೆ ದೊರೆಯಲಿ ಸೇವೆ ನಮಗಿರಲಿ ಈ ಎಲ್ಲಾ ಸನ್ಮಾನಗಳು ಗೌರವಗಳು ಪ್ರಶಸ್ತಿಗಳು ಸಮಸ್ತ ದಾನಿಗಳಿಗೆ ಅರ್ಪಣೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.**

## ಧರಣಿ ಸತ್ಯಾಗ್ರಹಕ್ಕೆ ಅಂಬೇಡ್ಕರ್ ಸೇನೆ ಬೆಂಬಲ

o **ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಕಲಿಕೇರಿಯಿಂದ ಬಿಂಜಲಬಾವಿ ಗ್ರಾಮದ ಮಾರ್ಗವಾಗಿ ಕೆಸರಟ್ಟಿಯವರೆಗೆ ರಸ್ತೆ ಡಾಂಬರೀಕರಣ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ರಾಷ್ಟ್ರೀಯ ರೈತ ಸಂಘದ ಅಶೋಕಗೌಡ ನೇತೃತ್ವದಲ್ಲಿ ತಾಲೂಕ ಘಟಕದ ಪದಾಧಿಕಾರಿಗಳು ಜುಲೈ 20 ರಿಂದ ಬಿಂಜಲಭಾವಿ ಗ್ರಾಮದ ಹಳ್ಳದ ಹತ್ತಿರ ಆರಂಭಿಸಿದ ಧರಣಿಯಲ್ಲಿ ಅಂಬೇಡ್ಕರ್ ಸೇನೆ ತಾಳಿಕೋಟಿ ತಾಲೂಕ ಘಟಕದ ಪದಾಧಿಕಾರಿಗಳು ಗುರುವಾರ ಭಾಗವಹಿಸಿ ಬೆಂಬಲ ಸೂಚಿಸಿದರು.**

ಈ ಸಂದರ್ಭದಲ್ಲಿ ಸೇನೆಯ ಜಿಲ್ಲಾ ಉಪಾಧ್ಯಕ್ಷ ಬಸ್ಸು ಮಾದರ ಹಾಗೂ ತಾಲೂಕಾಧ್ಯಕ್ಷ ಗೋಪಾಲ ಕಟ್ಟಿಮನಿ ಮಾತನಾಡಿ ಸುಮಾರು ವರ್ಷಗಳಿಂದ ರಸ್ತೆ ಸುಧಾರಣೆಯಾಗದೆ ಈ ಭಾಗದ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಇಲ್ಲಿಯ ಜನಪ್ರತಿನಿಧಿ ಹಾಗೂ ಅಧಿಕಾರಿಗಳು ಆದಷ್ಟು



ಬೇಗ ಇದರ ಕುರಿತು ಕ್ರಮ ವಹಿಸಬೇಕು ಇದರ ಜೊತೆಗೆ ಈ ಭಾಗದ ರೈತರ ಹಲವಾರು ನ್ಯಾಯ ಯುತವಾದ ಬೇಡಿಕೆಗಳಿವೆ ಅವುಗಳನ್ನು ಆದಷ್ಟು ಬೇಗ ಈಡೇರಿಸಬೇಕು ಇಲ್ಲದೆ ಹೋದಲ್ಲಿ ಈ ಹೋರಾಟ ಇನ್ನಷ್ಟು ಉಗ್ರವಾಗಿ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ರಾಷ್ಟ್ರೀಯ ರೈತ ಸಂಘ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಹಣಮಂತ ಈ.ವಡ್ಡರ, ಜಿಲ್ಲಾ ಉಪಾಧ್ಯಕ್ಷ ಮ?ಬೂಬಬಾಷಾ ಮನಗೂಳಿ, ತಾಳಿಕೋಟಿ ತಾಲೂಕಾ ಉಪಾಧ್ಯಕ್ಷ ಶರಣು ಕವದಿ, ಮತ್ತು ತಾಳಿಕೋಟಿ ಅಂಬೇಡ್ಕರ್ ಸೇನೆ ಯುವ ಮೋರ್ಚಾ ಅಧ್ಯಕ್ಷ ಗೌಡಪ್ಪಗೌಡ ಹಳಿಮನಿ, ಹಿರಿಯ ಮುಖಂಡ ಮಲ್ಲಪ್ಪ ಶಿರೋಳ, ಅಂಬೇಡ್ಕರ್ ಸೇನೆ ಪ್ರಧಾನ ಕಾರ್ಯದರ್ಶಿ ಕಾಶಿನಾಥ ಕಟ್ಟಿಮನಿ,ದಲಿತ ಮುಖಂಡ ರಮೇಶ ಮಾದರ ಹಡಗಿನಾಳ,ಯುವ ಮುಖಂಡ ಬಾಬುಗೌಡ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

## ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ, ಓದುವಿಕೆ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಜೀವನದಲ್ಲಿ ಯಶಸ್ಸು ಸಾಧಿಸಿ ? ಯಾಳ್ಪಿ ವಲಿಭಾಷ

o **ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ/ಕಂಪ್ಲಿ: ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿರುವ ಪರಿಣಾಮ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದ್ದು, ಇದು ಅವರ ಭವಿಷ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷ ಹೇಳಿದರು.**

ಪಟ್ಟಣದ ಷಾಮಿಯಾಚಂದ್ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಮೊಬೈಲ್‌ಗೆ ಅಂಟಿಕೊಳ್ಳುವುದನ್ನು ಬಿಟ್ಟು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು.ರ ಓದುವಿಕೆ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಜೀವನದಲ್ಲಿ ಯಶಸ್ಸು ಸಾಧಿಸಲು ಸಹಕಾ- ರಿಯಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ




ಉನ್ನತ ಗುರಿಯನ್ನು ಹೊಂದಿ ಅದನ್ನು ಸಾಧಿಸಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಸಮಾಜ ಹಾಗೂ ದೇಶದ ಬಗ್ಗೆ ಕಾಳಜಿ ಹೊಂದಲು ಉತ್ತಮ ಚಿಂತನೆ, ವಿವೇಚನಾ ಶಕ್ತಿ ಮತ್ತು ವಿಶ್ಲೇಷಣಾ ಮನೋಭಾವ ಅಗತ್ಯ. ಪ್ರತಿಯೊಂದು ವಿಷಯವನ್ನು ವಿಮರ್ಶಾತ್ಮಕವಾಗಿ ಅರ್ಥೈಸುವ ಗುಣವನ್ನು ವಿದ್ಯಾರ್ಥಿ ಜೀವನದಲ್ಲೇ ರೂಢಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದು ತಿಳಿಸಿದರು. ಜನಪ್ರತಿನಿಧಿಗಳು ನೀಡುವ ಭರವಸೆಗಳು ಕಾರ್ಯರೂಪಕ್ಕೆ ಬಾರದ ಸಂದರ್ಭಗಳಲ್ಲಿ ಅದನ್ನು ಸಮಾಜದ ಗಮನಕ್ಕೆ ತರುವ ಜವಾಬ್ದಾರಿಯನ್ನು ಪತ್ರಕರ್ತರು ನಿರ್ವಹಿಸುತ್ತಾರೆ. ಸಮಾಜದಲ್ಲಿ ನಡೆಯುವ ತಪ್ಪು-ಸರಿಗಳನ್ನು ಜನರಿಗೆ ತಿಳಿಸುವ ಮೂಲಕ ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಅಂಕುಶವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು.

ಪತ್ರಿಕೋದ್ಯಮದಲ್ಲಿ ಕೃತಕ ಬುದ್ಧಿಮತ್ತೆ (AI) ಬಳಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಎಐ ಆಧಾರಿತ ಸಾಧನಗಳನ್ನು ಬಳಸುವುದರಿಂದ ಲೇಖನಗಳನ್ನು ಹೆಚ್ಚು ಸ್ಪಷ್ಟವಾಗಿ ರೂಪಿಸುವುದು, ತಪ್ಪುಗಳನ್ನು ತಿದ್ದುಪಡಿ ಮಾಡುವುದು ಸಾಧ್ಯ. ಆದರೆ ಅನುಭವ, ಸೃಜನಶೀಲತೆ ಮತ್ತು ಮಾನವೀಯ ಮೌಲ್ಯಗಳಿಗೆ ಪರ್ಯಾಯವಾಗಿ ಎಐ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಜಿಲ್ಲಾ ಉಪಾಧ್ಯಕ್ಷ ಡಾ. ಗಿರೀಶ್ ಕುಮಾರ್ ಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು, ವೇದಿಕೆ ಅಧ್ಯಕ್ಷತೆಯನ್ನು ಕ.ಪ.ಸಂಘದ ಕಂಪ್ಲಿ ಘಟಕದ ಸಿದ್ದಿ ರಘುವೀರ್ ವಹಿಸಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಕೆ. ಬಜಾರಪ್ಪ, ಕುರುಗೋಡು ವೀರಭದ್ರಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದುರ್ಗೇಶ್ ಯಾದವ್, ವೀರಶೈವ ಲಿಂಗಾಯತ ಮಹಾವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ್, ಕಾಲೇಜಿನ ಪ್ರಾಂಶುಪಾಲ ಸಿದ್ದಣ್ಣ ಪರಮೇಶ್ವರ, ತಾಲೂಕು ಪಂಚಾಯತ್ ಇಒ ಆರ್.ಕೆ. ಶ್ರೀಕುಮಾರ್, ಮಲ್ಲನಗೌಡ, ದಲಿತ ಮುಖಂಡ ಕೆ. ಲಕ್ಷ್ಮಣ, ಹಿರಿಯ ಪತ್ರಕರ್ತ ಭಾವೈಕ್ಯ ವೆಂಕಟೇಶ, ಎ.ಎಸ್.ಐ ಬಸವರಾಜಪ್ಪ, ವಕೀಲ ಸುದರ್ಶನ್ ರೆಡ್ಡಿ, ಡಾ. ರವೀಂದ್ರ, ಪ್ರೌಢ ಶಾಲೆಯ ಮುಖ್ಯ ಗುರು ಸುಜಾತಾ, ಪಿ.ಡಬ್ಲ್ಯೂ.ಡಿ ಇಂಜಿನಿಯರ್ ಆನಂದ್, ಜಿಲ್ಲಾ ಕಾರ್ಯಕಾರಿ ಸದಸ್ಯ ರವಿ ಮಣ್ಣೂರು, ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಬಳೇ ಮಲ್ಲಿಕಾರ್ಜುನ,

ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆ ಅಧಿಕಾರಿ ಕೆ. ರಾಘವೇಂದ್ರ, ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕರ್ನಾಟಕ ಪತ್ರಕರ್ತರ ಸಂಘದ ಕಂಪ್ಲಿ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್. ಮರಿಯಪ್ಪ ನಿರೂಪಿಸಿದರು. ವರದಿ : ಜಿಲಾನಸಾಬ್ ಬಡಿಗೇರ್

## ಸಾಹಿತ್ಯ ಸಿಂಚನ

### ಭರವಸೆಯ ಬೆಳಕು

ಕತ್ತಲೆಯ ದಾರಿಯಲಿ ಹೊಳೆಯುವ ಕಿರಣವೇ
ಭರವಸೆ, ಕುಗ್ಗಿದ ಮನದೊಳಗೆ ಮೂಡುವ
ಹೊಸ ಕನಸೇ ಭರವಸೆ.

ಸೋಲಿನ ನೆರಳಲ್ಲೂ ಗೆಲುವಿನ ದಾರಿ
ತೋರುವುದು, ಕಣ್ಣೀರ ಹನಿಯಲ್ಲೂ ನಗುವಿನ
ಹೂವು ಅರಳಿಸುವುದು.

ಗಾಳಿ ಎಷ್ಟೇ ಬಿರುಸಾದರೂ ದೀಪ ನಂದದಂತೆ,
ಧೈರ್ಯ ತುಂಬಿ ಮುನ್ನಡೆಯುವ ಶಕ್ತಿಯೇ
ಭರವಸೆ.

ಮೋಡಗಳ ಹಿಂದೆ ಸೂರ್ಯನು ಅಡಗಿದ್ದರೂ,
ಬೆಳಕು ಮರಳಿ ಬರುತ್ತದೆ ಎನ್ನುವ ನಂಬಿಕೆಯೇ
ಅದು.

ಜೀವನದ ಮುಳ್ಳಿನ ಹಾದಿಯಲ್ಲೂ,
ಹೂವಿನ ಪರಿಮಳ ಹುಡುಕುವ ಮನಸ್ಸು
ಭರವಸೆ.

ಕೈಚೆಲ್ಲದೆ ಹೋರಾಡುವ ಹೆಜ್ಜೆಗೆ,
ಯಶಸ್ಸಿನ ದೀಪ ಹಚ್ಚುವ ಸ್ನೇಹಿತೆ ಭರವಸೆ.

ಪ್ರತಿ ಪ್ರಭಾತ ಹೊಸ ಅವಕಾಶದ ಸಂದೇಶ,
ಪ್ರತಿ ಉಸಿರು ಹೊಸ ಆರಂಭದ ಆಹ್ವಾನ.

ಮನದೊಳಗಿನ ವಿಶ್ವಾಸವೇ ಜೀವನದ ಬಲ,
ಭರವಸೆಯ ಬೆಳಕೇ ನಮ್ಮ ಬದುಕಿನ ಫಲ.

ಕನಸುಗಳಿಗೆ ರೆಕ್ಕೆ ನೀಡುವ ಶಕ್ತಿ ಅದು,
ಸಾಧನೆಗೆ ದಾರಿ ತೋರುವ ಸತ್ಯ ಅದು.

ಭರವಸೆ ಇದ್ದರೆ ಬದುಕು ಸುಂದರ,
ಭರವಸೆಯ ಬೆಳಕೇ ಜೀವನದ ಅಮರ ದೀಪ.

–ಅಮರೇಶ

## ಧರ್ಮೇಂದ್ರ ಪ್ರಧಾನ್ ನಾಳೆ ರಾಜೀನಾಮೆ ಸಾಧ್ಯತೆ!

o ನೈಜ್ಯ ದೆಸೆ ನ್ಯೂಸ್

ನವದೆಹಲಿ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ನಡೆಯುತ್ತಿರುವ ಚಳವಳಿಗೆ ಸಂಬಂಧಿಸಿದಂತೆ, ರಾಷ್ಟ್ರ ರಾಜಧಾನಿಯಲ್ಲಿ ಹಿರಿಯ ಕೇಂದ್ರ ಸಚಿವರು ಮತ್ತು ಪ್ರತಿಭಟನಾಕಾರರ ಪ್ರತಿನಿಧಿಗಳ ನಡುವೆ ನಡೆದ ಸಭೆಯ



ಬಳಿಕ, ತಮ್ಮ ಪ್ರಮುಖ ಬೇಡಿಕೆಯ ಕುರಿತು ತೀರ್ಮಾನ ಕೈಗೊಳ್ಳಲು ಕೇಂದ್ರ ಸರ್ಕಾರವು ಶನಿವಾರ ಮಧ್ಯಾಹ್ನದವರೆಗೆ ಕಾಲಾವಕಾಶ ಕೋರಿದೆ ಎಂದು ಕಾಕ್ರೋಚ್ ಜನತಾ ಪಾರ್ಟಿ ಮಾಹಿತಿ ನೀಡಿದೆ. ಈ ಸಭೆಯಲ್ಲಿ ಸರ್ಕಾರದ ಪರವಾಗಿ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮತ್ತು ಪಿಎಮ್ಓ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಭಾಗವಹಿಸಿದ್ದರೆ, ಸಿಜೆಪಿ ಪರವಾಗಿ ಅದರ ರಾಷ್ಟ್ರೀಯ ವಕ್ತಾರರಾದ ಸೌರವ್ ದಾಸ್ ಮತ್ತು ಅಶುತೋಷ್ ರಾಂಕಾ ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಎಕ್ಸಲೆಂಟ್ ಸ್ವತಂತ್ರ ಪದವಿ ಪೂರ್ವ ಮತ್ತು ಪದವಿ ಕಾಲೇಜಿನಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ವೈಭವ

o ನೈಜ್ಯ ದೆಸೆ ನ್ಯೂಸ್

ಸಿಂಧನೂರು :ಎಕ್ಸಲೆಂಟ್ ಸ್ವತಂತ್ರ ಪದವಿ ಪೂರ್ವ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶದಿಂದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಯೋಜಿಸಲಾಯಿತು.

ವೆಂಕಟರಾವ್ ಎಂ ಕಾರ್ಯದರ್ಶಿಗಳು ಹಾಗೂ ಪ್ರಾಂಶುಪಾಲರು ಎಕ್ಸಲೆಂಟ್ ಪದವಿ ಕಾಲೇಜು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ, ಆತ್ಮವಿಶ್ವಾಸ ಮತ್ತು ತಂಡದ ಮನೋಭಾವವನ್ನು ಬೆಳೆಸುವಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.



ಹಾಗೆಯೇ ನಾಗರಾಜ ಮುಕುಂದ, ತಿಮ್ಮಣ್ಣ ಕಲ್ಮಂಗಿ, ಸುಭಾಸ ಹರ್ವಾಪೂರು ಇವರು ಕಾರ್ಯಕ್ರಮದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ದೇಶಭಕ್ತಿ ಗೀತೆ, ಭಾವಗೀತೆ, ಜನಪದ ಗೀತೆ, ಏಕಾಭಿನಯ ಪಾತ್ರ, ಸೇರಿದಂತೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು. ಈ ಕಾರ್ಯಕ್ರಮದಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಎಕ್ಸಲೆಂಟ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಏಕಾಂಬರೇಶ್ವರಿ ಮತ್ತು ಎಕ್ಸಲೆಂಟ್ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಪ್ರತಿನಿಧಿಯಾದ ಖಾಸಿಂ ಖುರೇಷಿ ದಿದ್ದಿಗಿ. ಹಾಗೂ ಎಚ್ ಡಿ ಹಳ್ಳೂರ್, ಅಯ್ಯಣ್ಣ ಬಡಿಗೇರ್, ಜಮಿಲ್ ಅಹಮದ್ ಮೈಬೂಬ ಕೊಳಬಾಳ, ಶಿವಲೀಲಾ ಹಿರೇಮಠ ,ಉಪನ್ಯಾಸಕಿ. ರಾಣಿ, ಹನುಮೇಶ ,ಹುಲಗಣ್ಣ, ಜೂನೆದ ಪಾಷಾ . ಆನಂದ್ ಮಲ್ಲಾಪುರ್ . ಹನುಮಂತಪ್ಪ ಸುಕಲ್ ಪೇಟೆ . ವಿನಾಯಕ . ದೀಪ ಮಹಾಂಕಾಳೆಪ್ಪು ಅನಿಲ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು. ಅನೇಕ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

## ಜಾಲಹಳ್ಳಿಯಲ್ಲಿ ನೀಟ್ ಪರೀಕ್ಷೆ ಯಲ್ಲಿ ಅಕ್ರಮ ಕೇಂದ್ರ ಸರ್ಕಾರದ ವಿರುದ್ಧ ಎಸ್ ಎಫ್ ಐ ಉಗ್ರ ಪ್ರತಿಭಟನೆ

# ಪರೀಕ್ಷಾ ಅಕ್ರಮ ಖಂಡಿಸಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹ




o ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ದೇವದುರ್ಗ ತಾಲೂಕಿನ ಜಾಲಹಳ್ಳಿಯ ಅಂಬೇಡ್ಕರ್ ಸರ್ಕಲ್ ಬಳಿ ಶುಕ್ರವಾರ ಎಸ್–ಎಫ್ಐ ನೇತೃತ್ವದಲ್ಲಿ ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳು ಮತ್ತು ಗೊಂದಲಗಳನ್ನು ಖಂಡಿಸಿ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿರುವ ಪರೀಕ್ಷಾ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿದರು. ಪರೀಕ್ಷಾ ಅಕ್ರಮಗಳ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ನೀಟ್ ಅಕ್ರಮ ಹಾಗೂ ಗೊಂದಲಗಳಿಂದ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ ?1 ಕೋಟಿ ಪರಿಹಾರ ನೀಡಬೇಕು. ಪರೀಕ್ಷಾ ವ್ಯವಸ್ಥೆಯಲ್ಲಿನ ಕೇಂದ್ರೀಕರಣ, ಖಾಸಗೀಕರಣ ಮತ್ತು ಅವೈಜ್ಞಾನಿಕ ಪ್ರಯೋಗಗಳನ್ನು ಕೈಬಿಡಬೇಕು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಓಖಿಂ)ಯನ್ನು ರದ್ದುಪಡಿಸಿ, ನೀಟ್ ಪರೀಕ್ಷಾ ಪದ್ಧತಿಯನ್ನು ನಿಷೇಧಿಸಬೇಕು ಎಂದು ಒತ್ತಾಯಿಸಲಾಯಿತು.

ಇದೇ ವೇಳೆ, ವಿದ್ಯಾರ್ಥಿಗಳ ಭವಿಷ್ಯ ಅನಿಶ್ಚಿತತೆಗೆ ಸಿಲುಕಿರುವುದಕ್ಕೆ ಪ್ರಧಾನಮಂತ್ರಿಗಳು ನೈತಿಕ ಹೊಣೆ ಹೊತ್ತು ವಿದ್ಯಾರ್ಥಿಗಳಲ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗುವ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ಜೀವಾವಧಿ ಶಿಕ್ಷೆಯವರೆಗೆ ಶಿಕ್ಷೆ ವಿಧಿಸುವಂತಹ ಕಠಿಣ ಕಾಯ್ದೆ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ನರಸಣ್ಣ ನಾಯಕ, ಶಬ್ಬೀರ್ ಜಾಲಹಳ್ಳಿ ಹಾಗೂ ಎಸ್ಎಫ್ಐ ತಾಲೂಕು ಅಧ್ಯಕ್ಷ ಮಹಾಲಿಂಗ ದೊಡ್ಡಮನಿ ಅವರು ಕೇಂದ್ರ ಸರ್ಕಾರದ ನೀತಿಗಳನ್ನು ಖಂಡಿಸಿ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಸ್ಎಫ್ಐ ತಾಲೂಕು ಅಧ್ಯಕ್ಷ ಮಹಾಲಿಂಗ ದೊಡ್ಡಮನಿ, ಸಂತೋಷ ತ್ಯಾಪ್ಲಿ, ರೈತ ಮುಖಂಡ ನರಸಣ್ಣ ನಾಯಕ, ಶಬ್ಬೀರ್ ಜಾಲಹಳ್ಳಿ, ರಿಯಾಜ್ ಆರ್ಥಿ, ಮೌನೇಶ ಜಾಲಹಳ್ಳಿ, ಹನುಮಂತ ಮಡಿವಾಳ, ಹನುಮಂತ ಗುರಿಕಾರ, ಬಸವರಾಜ ಲಿಂಗದಹಳ್ಳಿ, ಮೈಬೂ ಕುರಕುಂದಿ, ಬಸವರಾಜ ವಂದಲಿ, ರಿಯಾಜ್ ಖುರೇಷಿ, ರಂಗನಾಥ ಬುಂಕಲದೊಡ್ಡಿ, ರಮಾದೇವಿ, ಚಂದ್ರಕಲಾ ಸೇ–ರಿದಂತೆ ನೂರಾರು ವಿದ್ಯಾರ್ಥಿಗಳು, ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಧಡೇಸೂಗೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಉಚಿತ ಆರೋಗ್ಯ ಶಿಬಿರ

o ನೈಜ್ಯ ದೆಸೆ ನ್ಯೂಸ್

ಸಿಂಧನೂರು; ಮಾನಸಿಕ ದಹಿಕ ಕಾಯಿಲೆಗಳ ಲಕ್ಷಣಗಳು ವಿಚಿತ್ರ ಮಾತು ಮತ್ತು ನಡವಳಿಕೆಗಳು ಭ್ರಾಂತಿ, ಬುದ್ಧಿ ಭ್ರಮಣೆ, ಖಿನ್ನತೆ, ನಿರುತ್ಸಾಹ, ನಿರಾಸೆ, ತಳಮಳ, ಆಲೋಚನೆಯ ವರ್ತನೆಗಳ ಪುನರಾವರ್ತನೆ, ಮಾದಕ ವಸ್ತು ಮತ್ತು ಮಧ್ಯಪಾನದ ಮೇಲೆ ನಿಯಂತ್ರಣವಿಲ್ಲ ಮಾನಸಿಕ ಮುನ್ನೆಚ್ಚರಿಕೆ ಕ್ರಮಗಳು ಅನುಸ–ರಿಸಬೇಕು ಎಂದು ಡಾ. ಮನೋವೈದ್ಯರಾದ ಮನೋಹರ್ ಪತ್ತಾರ್ ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ ರಾಜ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ರಾಯಚೂರು, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಧಡೇಸೂಗೂರು, ಇವರ ಸಂಯುಕ್ತಾಶ್ರಯದಲ್ಲಿ ಜು.24 ಶುಕ್ರವಾರದಂದು ಮಾನಸಿಕ ಆರೋಗ್ಯ ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಗೂ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡು ಮಾತನಾಡಿದರು.

ಶರೀರದ ಕೆಲಸ ಕಾರ್ಯದಲ್ಲಿ ಬದಲಾವಣೆ ತರುವುದು, ಅತಿಯಾದ ನಿದ್ರೆ,



ಹಸಿವು, ರುಚಿ, ಆಹಾರ ಸೇವನೆ, ಮೂತ್ರ ವಿಸರ್ಜನೆ, ಮನಸ್ಸು ಮತ್ತು ನಡುವಳಿಕೆಯಲ್ಲಿ ಬದಲಾವಣೆ, ಮಾತು ತೊದಲುವಿಕೆ ವಿಚಿತ್ರ ನಡಾವಳಿ, ಪಂಚೇಂದ್ರಿಯಗಳ ಅನುಭವ, ಅಲ್ಪಮಟ್ಟ ಜ್ಞಾಪಕಶಕ್ತಿ ಬಳಸಲು ಕಷ್ಟ ಆಗುವಂಥದ್ದು, ಸೂಕ್ತ ನಿರ್ಧಾರ ಮತ್ತು ಪ್ರಜ್ಞ ಸ್ಥಿತಿ ಇರುವುದಿಲ್ಲ, ಆಪ್ತ–ಸಮಾಲೋಚನೆಯನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ನಂತರ ಧಡೇಸೂಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ.ಆಂಜನೇಯ ಮಾತನಾಡಿ, ವೈಯಕ್ತಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಬದಲಾವಣೆಗಳು ತರುವಂತೆ ಮಾನಸಿಕ ಒತ್ತಡದ ನಿರ್ವಹಣೆಯಲ್ಲಿ ಆಪ್ತ ಸಮಾಲೋಚನೆ ಮತ್ತು ವೈದ್ಯರ ಸಲಹೆಗಳನ್ನು ಪಡೆಯಬೇಕು, ಸಿಂಧನೂರು ನಗರದಲ್ಲಿ ಪ್ರತಿ 3ನೇ ಮಂಗಳವಾರ ಕ್ಲಿನಿಕ್ ಇರುತ್ತದೆ ಮಾನಸಿಕ ಕಾಯಿಲೆ ಇರುವವರು ಚಿಕಿತ್ಸೆ ಪಡೆದು ಕೊಳ್ಳಬೇಕು ಹೆಚ್ಚಿನ ಮಾಹಿತಿಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲೂಕು ಆಸ್ಪತ್ರೆಗೆ ಸಂಪರ್ಕಿಸಿ ಎಂದು ತಿಳಿಸಿದರು.


ತಾಲೂಕು ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ, ಚಿತ್ತವಿಕಲತೆ, ಸ್ಥಿತಿಯ ಬೈಪಾಲಾರ್, ಮನೋವಿಕಲತೆ, ಸನ್ನಿಮ–ರಿವಿನ ರೋಗ, ದುಶ್ಚಟಗಳ ಅಪಾಯಕಾರಿ ವಿಕೃತ ನಡುವಳಿಕೆಗಳು ಬುದ್ಧಿಮಾಂದ್ಯತೆ ಮಧ್ಯಪಾನ ಮಾದಕ ದ್ರವ್ಯ ವ್ಯಸನ ರೋಗ ಹೊಂದಿರುವುದು ಮನುಷ್ಯನಿಗೆ ಅಪಾಯಕಾರಿ ಈ ಕಾಯಿಲೆ ಗುಣಪಡಿಸಲು ಸರಿಯಾದ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು ಎಂದರು.

ಈ ವೇಳೆ: ಅರುಣಕುಮಾರ ಹಾಗೂ ಡಿಎಮ್.ಎಚ್.ಪಿ ತಂಡ ರಾಯಚೂರು, ಅಭಿಲಾಷ್ ಸಿಎಚ್.ಓ, ಶಾಹಿಲಾ, ಪಿಎಚ್.ಸಿಒ, ಸುನೀತಾ ವಿನೋದಾ ಎಸ್. ಎನ್, ಸೇರಿದಂತೆ ಆಶಾಕಾರ್ಯಕರ್ತೆಯರು, ಸಾರ್ವಜನಿಕರು, ಉಪಸ್ಥಿತರಿದ್ದರು.

## ಬಳ್ಳಾರಿ– ಗುಂತಕಲ್ ನಡುವಿನ 1,264 ಕೋಟಿ ವೆಚ್ಚದ ರೈಲು ಮಾರ್ಗಕ್ಕೆ ಸಂಪುಟ ಒಪ್ಪಿಗೆ

o ನೈಜ್ಯ ದೆಸೆ ನ್ಯೂಸ್

ನವದೆಹಲಿ: ಕರ್ನಾಟಕದ ರೈಲ್ವೆ ಯೋಜನೆ ಬಗ್ಗೆ ಇಂದು ನಡೆದ ಸಂಪುಟ ಸಭೆಯಲ್ಲಿ ಮುಖ್ಯವಾದ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೇಂದ್ರ ಸಂಪುಟ ನಿರ್ಧಾರಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಆಂಧ್ರಪ್ರದೇಶ ಮತ್ತು ಕರ್ನಾಟಕವನ್ನು ಸಂಪರ್ಕಿಸುವ 1,264 ಕೋಟಿ ರೂ. ವೆಚ್ಚದ ಬಳ್ಳಾರಿ–ಗುಂತಕಲ್ ರೈಲ್ವೆ ಯೋಜನೆಗೆ ಕೇಂದ್ರ



ಸಚಿವ ಸಂಪುಟ ಅನುಮೋದನೆ ನೀಡಿದೆ.

ಪಿಎಂ ಗತಿ ಶಕ್ತಿ ರಾಷ್ಟ್ರೀಯ ಬೃಹತ್ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ 46 ಕಿ.ಮೀ ಉದ್ದದ ಮಲ್ಟಿ–ಟ್ರ್ಯಾಕಿಂ–ಗ್ ಯೋಜನೆಯು, ರೈಲು ಮಾರ್ಗದ ಸಾಮರ್ಥ್ಯವನ್ನು ಹೆಚ್ಚಿಸುವುದು, ಸರಕು ಸಾಗಣೆಯನ್ನು ಸುಗಮಗೊಳಿಸುವುದು ಮತ್ತು ಬಹುಮಾದರಿ ಸಂಪರ್ಕವನ್ನು ಬಲಪಡಿಸುವ ಗುರಿಯನ್ನು ಹೊಂದಿದ್ದು, 2028–29ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ರೈಲು ಮಾರ್ಗ ಕರ್ನಾಟಕದ ಬಳ್ಳಾರಿ ಹಾಗೂ ಆಂಧ್ರಪ್ರದೇಶದ ಅನಂತಪುರ ಮತ್ತು ಕರ್ನೂಲ್ ಸೇರಿದಂತೆ ಒಟ್ಟು 3 ಜಿಲ್ಲೆಗಳಲ್ಲಿ ಈ ಯೋಜನೆ ಹಾದುಹೋಗಲಿದೆ.

ಇತ್ತೀಚೆಗೆ ಬಳ್ಳಾರಿ ಸಂಸದರಾದ ಇ. ತುಕಾರಾಂ ಇದರ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಮನವಿ ಮಾಡಿಕೊಂಡಿದ್ದರು. ಇದರ ಫಲವಾಗಿ ಕಾರ್ಯರೂಪಗೊಂಡಿದೆ.

# ಶಾಸಕರಿಂದ ಮನ ಒಲಿಕೆ ಹೋರಾಟ ತಾತ್ಕಾಲಿಕ ಮುಂದೂಡಿಕೆ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ತಾಲ್ಲೂಕಿನ ಕಲಕೇರಿಯಿಂದ ಬಿಂಜಲಬಾವಿ ಗ್ರಾಮದ ಮಾರ್ಗವಾಗಿ ಕೆಸರಟ್ಟಿಯವರೆಗೆ ರಸ್ತೆ ಡಾಂಬರೀಕರಣ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ರಾಷ್ಟ್ರೀಯ ರೈತ ಸಂಘ ತಾಲ್ಲೂಕು ಘಟಕದ ಪದಾಧಿಕಾರಿಗಳು ಬಿಂಜಲಭಾವಿ ಗ್ರಾಮದ ಹತ್ತಿರ ನಡೆಸುತ್ತಿರುವ ಧರಣಿ ಸತ್ಯಾಗ್ರಹದ ನಾಲ್ಕನೆಯ ದಿನವಾದ ಶುಕ್ರವಾರ ದೇವರ ಹಿಪ್ಪರಗಿ ಶಾಸಕ ರಾಜುಗವಡ ಪಾಟೀಲ ಕುದರಿ ಸಾಲವಾಡಗಿ ಭೇಟಿ ನೀಡಿದರು.

ಹೋರಾಟಗಾರರೊಂದಿಗೆ ಮಾತನಾಡಿ ಇದೇ ಸೋಮವಾರದಿಮದಲೇ ರಸ್ತೆ ದುರಸ್ತಿ ಕಾರ್ಯವನ್ನು ಪ್ರಾರಂಭಿಸಲಾಗುವುದು.



ಮರ್ಮು ಹೊಡೆಸಿ,ತೆಗ್ಗುಗಳನ್ನು ಮುಚ್ಚಿ ರಸ್ತೆ ಸಮ ಮಾಡಲಾಗುವುದು, ಈ ರಸ್ತೆ ದುರಸ್ತಿಗೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಮತ್ತೊಮ್ಮೆ ಲೊಕೋಪಯೋಗಿ ಇಲಾಖೆಯ ಸಚಿವರಿಗೆ ಭೇಟಿಯಾಗಿ ಅನುಮೋದನೆಗೆ ಒತ್ತಾಯಿಸುತ್ತೇನೆ. ಮೂರ್ನಾಲ್ಕು ತಿಂಗಳಲ್ಲಿ ಸರ್ಕಾರದ ಆದೇಶ ಪಡೆದು ಟೆಂಡರ್ ಮೂಲಕ ಕಾಮಗಾರಿ ಪ್ರಾರಂಭಿಸಲಾಗುವುದು. ಹಾಗೂ ಇನ್ನುಳಿದ ಬೇಡಿಕೆಗಳನ್ನು ಹಂತಹಂತವಾಗಿ ಕಾಲಮಿತಿಯಲ್ಲಿ ಈಡೇರಿಸಲಾಗುವುದು ಆದ್ದರಿಂದ ಧರಣಿ ಸತ್ಯಾಗ್ರಹವನ್ನು ಕೈಬಿಡುವಂತೆ ಮನ ಒಲಿಸಿದರು ಶಾಸಕರ ಮಾತುಗಳಿಗೆ

ಪ್ರತಿಕ್ರಿಯಿಸಿದ ಹೋರಾಟಗಾರರು, ಸೋಮವಾರದವರೆಗೆ ಕಾಯುತ್ತೇವೆ. ಒಂದು ವೇಳೆ ಸೋಮವಾರದಂದು ರಸ್ತೆ ದುರಸ್ತಿ, ಚಾಲನೆ ಆಗದಿದ್ದರೆ ಅಂದೇ ಸಂಜೆಗೆ ಮತ್ತೆ ಧರಣಿ ಸತ್ಯಾಗ್ರಹ ಮುಂದುವರೆಸಲಾಗುವುದು ಎಂದು ತಿಳಿಸಿ ತಮ್ಮ ಸತ್ಯಾಗ್ರವನ್ನು ಸಮಾಪ್ತಗೊಳಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ರೈತರ ಸಂಘದ ತಾಳಿಕೋಟೆ ತಾಲ್ಲೂಕು ಘಟಕದ ಅಧ್ಯಕ್ಷ ಅಶೋಕಗೌಡ ಪಾಟೀಲ, ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಹಣಮಂತ ವಡ್ಡರ, ತಾಲ್ಲೂಕು ಯುವಮೋರ್ಚಾ ಅಧ್ಯಕ್ಷ ಗೌಡಪ್ಪಗೌಡ ಹಳಿಮನಿ ಅಸ್ಕಿ, ಜಿಲ್ಲಾ ಉಪಾಧ್ಯಕ್ಷ ಮೈಬುಬಭಾಷಾ ಮನಗೂಳಿ, ದೇವರ ಹಿಪ್ಪರಗಿ ತಾಲ್ಲೂಕು ಅಧ್ಯಕ್ಷ ಶಿವಪ್ಪ ಡೊಣೂರ, ಸಿದ್ದಣ್ಣ ಅಸ್ಕಿ, ನಿಂಗನಗೌಡ ಪಾಟೀಲ್, ಸಂಗಮೇಶ ಹುಣಸಗಿ, ತಹಶೀಲ್ದಾರ ಡಾ.ವಿನಯಾ ಹೂಗಾರ, ತಾಲ್ಲೂಕಾ ಜೆಡಿಎಸ್ ಅಧ್ಯಕ್ಷ ಮಡುಸಾಹುಕಾರ ಬಿರಾದಾರ,ಕಾಶೀಮ ನಾಯ್ಕೊಡಿ ಇಲಾಖೆಯ ಅಧಿಕಾರಿಗಳು ಇತರರಿದ್ದರು.

## ನೇಮಕಾತಿ ಪ್ರಕಟಣೆ


**ಬೆಳಗಾವಿ ಡಿ.ಸಿ.ಸಿ. (DCC) ಬ್ಯಾಂಕ್ ನೇಮಕಾತಿ 2026 ? 104 ಸೆಕೆಂಡ್ ಡಿವಿಷನ್ ಕ್ಲರ್ಕ್, ಗನ್–ಮ್ಯಾನ್ ಮತ್ತು ಪ್ಯೂನ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜುಲೈ 24, 2026**

ಬೆಳಗಾವಿ ಡಿ.ಸಿ.ಸಿ. ಬ್ಯಾಂಕ್ ನೇಮಕಾತಿ 2026: 104 ಸೆಕೆಂಡ್ ಡಿವಿಷನ್ ಕ್ಲರ್ಕ್, ಗನ್–ಮ್ಯಾನ್ ಮತ್ತು ಪ್ಯೂನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿಮಿಟೆಡ್ (Belagavi DCCB), ಏಪ್ರಿಲ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಜೂನಿಯರ್ ಅಸಿಸ್ಟೆಂಟ್ ಮತ್ತು ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರ ಅಥವಾ ಬೆಳಗಾವಿಯಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 27 ಆಗಸ್ಟ್ 2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: belagavidccb.bank.in

## ಜಾಮಿಯಾ ಮಸೀದಿಗೆ ಶಾಸಕ ನಾಡಗೌಡ ಭೇಟಿ.

o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪುಟ್ಟಣದ ಐತಿಹಾಸಿಕ ಸಾತೋ ಶಹೀದ ಜಾಮೀಯಾ ಮಸೀದಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಅಪ್ಪಾಜಿ ನಾಡಗೌಡರು ಶುಕ್ರವಾರ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹಮದ್ ಖಾಜಿ ಹಾಗೂ ಮಸೀದಿ ಮುಖ್ಯಸ್ಥರೊಂದಿಗೆ ಮಸೀದಿ ನಿರ್ಮಾಣದ ಕುರಿತು ಮಾತನಾಡಿ ಸರ್ಕಾರದ ಸೌಲಭ್ಯಗಳು ಪಡೆಯಲು ತಿಳಿಸಿದರು.



ಮಸೀದಿ ಸುಂದರವಾಗಿ ನಿರ್ಮಾಣಗೊಂಡಿರುವುದಕ್ಕೆ ಶಾಸಕರು ಸಂತೋಷ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಜಾಮೀಯಾ ಮಸೀದಿ ಕಮಿಟಿ ವತಿಯಿಂದ ಶಾಸಕ ನಾಡಗೌಡರನ್ನು ಸನ್ಮಾನಿಸಿ ಗೌರವಿಸಲಾಯಿತು. ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹಮದ್ ಕಾಜಿ ಅವರು ಶಾಸಕರಿಗೆ ಸಚಿವ ಸ್ಥಾನ ಸಿಗಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಈ ಸಮಯದಲ್ಲಿ ಗಣ್ಯರಾದ ವಿ.ಸಿ.ಹಿರೇಮಠ, ಸಿದ್ದನಗೌಡ ಪಾಟೀಲ ನಾವದಗಿ, ಸಂಗನಗೌಡ ಅಸ್ಕಿ, ಹಸನಸಾಬ ಮನಗೂಳಿ, ಮುರ್ತುಜಾ ಮೇತ್ರಿ, ಮೋದಿನಸಾ ನಗಾರ್ಚಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹೆಬೂಬ ಕೆಂಭಾವಿ, ಮಂಜೂರಲಿ ಬೇಪಾರಿ, ತನ್ವೀರ್ ಮನಗೂಳಿ,ಆಸೀಫ್ ಕೆಂಭಾವಿ,ಮಲ್ಲನಗೌಡ ದೇಸಾಯಿ ಮತ್ತೀತರರು ಇದ್ದರು.

## ಬಾಪುಗೌಡ ಸಂಗನಗೌಡ ಪಾಟೀಲರಿಗೆ ಸನ್ಮಾನ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಇತ್ತೀಚೆಗೆ ನಡೆದ ಶ್ರೀ ದ್ಯಾಮವ್ವ




ತಾಯಿಯ ಜಾತ್ರೋತ್ಸವ ಧರ್ಮಸಭೆಯಲ್ಲಿ ಭಾಗವಹಿಸಲು ಆಗಮಿಸಿದ ಸಂದರ್ಭದಲ್ಲಿ ಜಾತ್ರಾ ಕಮಿಟಿ ಮುಖ್ಯಸ್ಥರಾದ ಬಾಪುಗೌಡ ಸಂಗನಗೌಡ ಪಾಟೀಲ ಇವರನ್ನು ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಶಾಖಾ ಮಠ ಬಿಸರಳ್ಳಿಯ ಪೂಜ್ಯ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು ಆಶೀರ್ವಾದ ನೀಡಿ ಗೌರವಿಸಿದರು.ಈ ಸಮಯದಲ್ಲಿ ಅಶೋಕಗೌಡ ಪಾಟೀಲ ಒಳಗೊಂಡು ಪಾಟೀಲ ಕುಟುಂಬದ ಸದಸ್ಯರು ಇದ್ದರು.

## ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚುಟುಕುಗಳನ್ನು ರಚಿಸಿ: ಡಾ॥ ಹುಸೇನಪ್ಪ ಅಮರಾಪುರ

o ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕಡಿಮೆ ಶಬ್ದಗಳನ್ನು ಬಳಸಿ ಅರ್ಥ–'ಗರ್ಭಿತವಾದ, ನಾಲ್ಕು ಸಾಲಿನ ಚುಟುಕುಗಳನ್ನು ರಚಿಸುವುದು ಸುಲಭವಲ್ಲ ಹಿರಿಯ ಕವಿಗಲ, ಸಾಹಿತಿಗಳ ಕವನ, ಚುಟುಕು. ಕಥೆಗಳನ್ನು ಓದುವುದರ ಮೂಲಕ ಶಬ್ದಸಂಪತ್ತನ್ನು ಹೆಚ್ಚಿಸಿಕೊಂಡು ಕವನ, ಚುಟುಕುಗಳನ್ನು ರಚಿಸಲು ಪ್ರಯತ್ನಿಸಬೇಕು ದೀರ್ಘವಾದ ಕವನ, ಕಥೆ, ಕಾದಂಬರಿಗಳನ್ನು ಓದುವುದು ಪ್ರಸ್ತುತ ದಿನಗಳಲ್ಲಿ ಸಾಧ್ಯವಾಗುತ್ತಿಲ್ಲ ಹೇಳುವ ವಿಷಯವನ್ನು ಚಿಕ್ಕದಾಗಿ, ಚೊಕ್ಕದಾಗಿ, ಮಿಂಚಿನಂತೆ ಹೊಳೆಯುವಂತೆ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುವ ಚುಟುಕುಗಳನ್ನು ರಚಿಸಬೇಕೆಂದು ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ॥ ಹುಸೇನಪ್ಪ ಅಮರಾಪುರ ಸಹೇಳಿದರು.

ಅವರು ತಾಲೂಕಿನ ಜಾಲಿಹಾಳ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಿಂಧನೂರು ತಾಲೂಕ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ 'ಕಾಲೇಜಿಗೊಂದು ಚುಟುಕು ಚಂದನ ' ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯದಲ್ಲಿ ಚುಟುಕುಗಳ ಜನಪ್ರಿಯತೆ ಕುರಿತು ಉಪನ್ಯಾಸ ನೀಡಿದರು.




ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಘನಮಠದಯ್ಯಸ್ವಾಮಿ ಡೊಳ್ಳು ಬಾರಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾಲೇಜಿನಲ್ಲಿ ಸಾಹಿತ್ಯದ ಬಗ್ಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಒಳ್ಳೆಯದು ಎಂದರು. ತಾಲೂಕ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಮ್.ಭಾಸ್ಕರ್ ಯೋಗ, ಸಮತೋಲನ ಆಹಾರ ಹಾಗೂ ಆರೋಗ್ಯದ ಕುರಿತು ಮಾತನಾಡಿ ತಮ್ಮ ಹಲವು ಸ್ವರಚಿತ ಚುಟುಕುಗಳನ್ನು ವಾಚಿಸಿದರು

ರಾಯಚೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಬೀರಪ್ಪ ಶಂಭೋಜಿ ಕನ್ನಡ ಸಾಹಿತ್ಯದಲ್ಲಿ ಚುಟುಕುಗಳ ಮಹತ್ವ ಹಾಗೂ ಜನಪ್ರಿಯತೆಯ ಕುರಿತು ಉಪನ್ಯಾಸ ನೀಡಿ, ಚುಟುಕು ಬ್ರಹ್ಮ ದಿನಕರ ದೇಸಾಯಿ, ಚುಟುಕು ಯುಗಾಚಾರ್ಯ ಎಮ್.ಜಿ.ಆರ್. ಅರಸ್, ಚುಟುಕು ಸಿರಿ ರತ್ನಾ ಹಾಲಪ್ಪಗೌಡ, ಜಂಬಣ್ಣ ಅಮರಚಿಂತ, ಡಿ.ವಿ.ಬಡಿಗೇರ, ಹನುಮಂತಪ್ಪ ಅಂಡಗಿ ಡಾ॥ ಮಲ್ಲಿಕಾ ಘಂಟಿ, ಲೀಲಾವತಿ ಆರ್. ಪ್ರಸಾದ, ರುದ್ರಮ್ಮ ಹಾಸಿನಾಳ ಮುಂತಾದವರ ಚುಟುಕುಗಳನ್ನು ಚುಟುಕುಗಳನ್ನು ವಾಚಿಸಿದರು, ರಾಯಚೂರು ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷ ಡಾ॥ ಹುಸೇನಪ್ಪ ಅಮರಾಪುರ ಅವರ ಕ್ರಿಯಾಶೀಲತೆ, ಸಂಘಟನೆ, ಸಾಹಿತ್ಯ ಕು–ರಿತು ಮೆಚ್ಚುಗೆ ವ್ಯಕ್ತಪಡಿಸಿ ಉಟುಕು ಸಾಹಿತ್ಯ ಪರಿಷತ್ತಿನಿಂದ ಗೌರವಿಸಿ ಸನ್ಮಾನಿಸಿದರು.

ಅಧ್ಯಕೆ–ತಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಮುರಡಯ್ಯಸ್ವಾಮಿ ಮಾತನಾಡಿ ಕಾಲೇಜಿನ ಪಠ್ಯ ವಿಷಯಗಳನ್ನು ಓದುವುದರ ಜೊತೆಗೆ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ಸಮಾಜದಲ್ಲಿಯ ಲೋಪ ದೋಷಗಳನ್ನು ಸರಿಪಡಿಸುವ ಸೇವೆ ಮಾಡೇಕೆಂದರು.

ಚುಟುಕು ಕವಿಗೋಷ್ಠಿಯಲ್ಲಿ ವೀರೇಶಮ್ಮ, ರೇಖಾ, ಐಶ್ವರ್ಯ,ಜ್ಯೋತಿ, ಮಹಿಬೂಬಿ ಶೋಯೆಲ್ ತನ್ವಿರ್, ಸ್ವರಚಿತ ಚುಟುಕುಗಳನ್ನು ವಾಚಿಸಿದರು. ಜಾಲಿಹಾಲ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಾಳಪ್ಪ ಬರಸಿ, ಕಾಲೇಜಿನ ಉಪನ್ಯಾಸಕರಾದ ವಿಜಯಕುಮಾರ, ವೆಂಕಟೇಶ, ಅತಿಥಿ ಉಪನ್ಯಾಸಕರಾದ ಬಸವರಾಜ, ಸುನಿತಾ ಉಪಸ್ಥಿತರಿದ್ದರು.

## ಚರಂಡಿ ವ್ಯವಸ್ಥೆ ಸರಿಪಡಿಸಲು ನಟರಾಜ ಕಾಲೋನಿ ಸಾರ್ವಜನಿಕರಿಂದ ನಗರಸಭೆ ಅಧಿಕಾರಿಗಳಿಗೆ ಮನವಿ

o ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ನಟರಾಜ ಕಾಲೋನಿಯಲ್ಲಿ ಯುಜಿಡಿಯ ಚರಂಡಿ ವ್ಯವಸ್ಥೆ ಸರಿಯಿಲ್ಲದ ಕಾರಣ ಗಟಾರ್ ನೀರು ಮನೆಗಳಿಗೆ ನುಗ್ಗುತ್ತಿದೆ. ನಗರಸಭೆಯಲ್ಲಿ ಈಗಾಗಲೇ ಎಸ್ಟಿಮೇಟ್ ರೆಡಿಯಿದ್ದರೂ ಕೂಡ ಸರಿಯಾಗಿ ಚರಂಡಿ ನೀರು ಹೋಗುವ ವ್ಯವಸ್ಥೆ ಮಾಡದೆ ನಿರ್ಲಕ್ಷ್ಯ ವಹಿಸಿ ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ ಎಂದು ವಾರ್ಡಿನ ಜನರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಶಂಕರ್ ಟ್ರಸ್ ಕಾಲೇಜಿನ ಎದುರುಗಡೆ ಇರುವ ವಾರ್ಡಿನಲ್ಲಿ ಚರಂಡಿ ವ್ಯವಸ್ಥೆಯನ್ನು ನಗರಸಭೆ ಅಧಿಕಾರಿಗಳು ಮಾಡದ ಕಾರಣ ಇಂದು ಚರಂಡಿ ನೀರು ತುಂಬಿ ಗಲೀಜು ನೀರು ಮನೆಗಳಿಗೆ ನುಗ್ಗುತ್ತಿದೆ.



ಈಗಾಗಲೇ ಅನೇಕ ಬಾರಿ ನಗರಸಭೆಗೆ ಅರ್ಜಿ ಸಲ್ಲಿಸಿ ಮೌಖಿಕವಾಗಿ ತಿಳಿಸಿದರು ಪ್ರಭಾವಿ ವ್ಯಕ್ತಿಗಳ ಮಾತು ಕೇಳಿ ಚರಂಡಿಂ–ಯನ್ನು ಸಂಪೂರ್ಣ ಬಂದ್ ಮಾಡಿದ್ದಾರೆ.

ಈ ಕಾರಣವಾಗಿ ಪಕ್ಕದ ಖಾಲಿ ಜಾಗ ಇರುವುದರಿಂದ ಅಲ್ಲಿಂದ ಚರಂಡಿ ನೀರು ಹೋಗಲು ಅನುಕೂಲ ಮಾಡಿದ್ದರು. ಆದ–'ರೆ ಈಗ ಆ ಜಾಗದಲ್ಲಿ ಈಗ ಮಣ್ಣು ಹಾಕಿ ಮೆಚ್ಚಿದ್ದರ ಪರಿಣಾಮವಾಗಿ ಗಟಾರ್ ತುಂಬಿ ಗಲೀಜು ನೀರು ಮನೆಗಳಿಗೆ ನುಗ್ಗುತ್ತಿದೆ. ಈ ಮೊದಲು ಎಸ್ಟಿಮೇಟ್ ಇದ್ದಹಾಗೆ ನಮಗೆ ಚರಂಡಿ ವ್ಯವಸ್ಥೆ ಮಾಡಿ ಕೊಡಲು ನಗರಸಭೆ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು. ಈ ವೇಳೆ: ಮಾಜಿ ನಗರಸಭೆ ಸದಸ್ಯ ಕೆ.ರಾಜಶೇಖರ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪೂರು, ನಗರಸಭೆ ಅಧಿಕಾರಿಗಳು, ಸೇ–ರಿದಂತೆ ವಾರ್ಡಿನ ಸಾರ್ವಜನಿಕರು ಇದ್ದರು.

## ಸಂಸತ್ ಚಲೋ ಪ್ರತಿಭಟನೆಯ ವೇಳೆ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿರುವುದು ಖಂಡನಿಯ : ಎಂ ಎಲ್ ಸಿ ಬಯ್ಯಪುರ

o ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ದೆಹಲಿಯ ಜಂತರ್ ಮಂತರ್ ನಲ್ಲಿ ನಡೆದ ಸಂಸತ್ ಚಲೋ ಪ್ರತಿಭಟನೆಯ ವೇಳೆ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿರುವುದು ತೀವ್ರ ಖಂಡನಿಯ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದಾ ವಿದ್ಯಾರ್ಥಿಗಳು ಹಾಗೂ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಪೊಲೀಸರು ಬಲ ಪ್ರಯೋಗ ನಡೆಸಿರುವಿದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ದಕ್ಕೆ ತರುವ ಕ್ರಮವಾಗಿದೆ**

ಪ್ರತಿಭಟನಾ ಕಾರರನ್ನು ಬಂಧಿಸುವುದು ಖಂಡನಿಯ ವಾಗಿದೆ ಎಂದು ಲಿಂಗಸಗೂರು ತಾಲೂಕ ಕಾಂಗ್ರೆಸ್ ಸಮಿತಿಯ ವತಿಯಿಂದ ಎಂ ಎಲ್ ಸಿ ಶರಣುಗೌಡ ಪಾಟೀಲ್ ಬಯ್ಯಪುರ ರವರ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಮೆರವಣಿಗೆ ನಡೆಸಿ ಸಹಾಯಕ ಆಯುಕ್ತರ ಮೂಲಕ ರಾಷ್ಟ್ರಪತಿ ದ್ರೌಪತಿ ಮುರ್ಮು ರವರಿಗೆ ಮನವಿಯನ್ನು ಸಲ್ಲಿಸಿ ನಂತರ ಮಾತನಾಡಿದ ಅವರು ನೂರಾರು ಅಮಾಯಕ ಯುವಕ , ಯುವತಿಯರು , ಪೊಲೀಸರ ನಿರ್ಧಾಯ ಲಾಠಿ ಏಟಿನಿಂದಾಗಿ ಗಾಯ ಗೊಂಡಿದ್ದಾರೆ ಕೇವಲ ದೆಹಲಿಯಲ್ಲಿ ಮಾತ್ರವಲ್ಲ ಕರ್ನಾಟಕವು ಸೇ–






ರಿದಂತೆ ಇಡೀ ದೇಶದಲ್ಲಿ ಕೇಂದ್ರ ಸರಕಾರದ ಶಿಕ್ಷಣ ಮತ್ತು ಯುವಜನ ವಿರೋಧ ನೀತಿಯ ವಿರುದ್ಧ ಯುವಜನರು ಸಿಡಿದೆದ್ದು ಬೀದಿಗಿಳಿದಿದ್ದಾರೆ. ಒಬ್ಬ ಅಸಮರ್ಥ ಮತ್ತು ಭ್ರಷ್ಟ ಶಿಕ್ಷಣ ಮಂತ್ರಿಯ ಕ್ರಮ ಕೈಗೊಳ್ಳಲು ಸಾಧ್ಯವಾಗದ ನರೇಂದ್ರ ಮೋದಿ ಯವರು ತಾವೊಬ್ಬ ದುರ್ಬಲ ಮತ್ತು ದುಷ್ಟ ರಕ್ಷಕ ಪ್ರಧಾನಿ ಎನ್ನುವುದು ಸಾಬೀತು ಪಡಿಸಿದ್ದಾರೆ. ವಿದ್ಯಾರ್ಥಿಗಳ ಮೇಲಿನ ಪೊಲೀಸ್ ದೌರ್ಜನ್ಯವನ್ನು ವಿರೋಧಿಸಿ ಧ್ವನಿ ಎತ್ತಿದ ಲೋಕ ಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ , ಸಂಸದೆ ಪ್ರಿಯಾಂಕಾ ಗಾಂಧಿ , ಸೇರಿದಂತೆ ಮುಖಂಡರನ್ನು ಪೊಲೀಸರು ಬಲವಂತವಾಗಿ ಎಳೆ ದೋಯಿದಿರುವುದು ಪ್ರಜಾಪ್ರಭುತ್ವ ದ ವ್ಯವಸ್ಥೆಗೆ ಒಂದು ಕಪ್ಪು ಚುಕ್ಕೆ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸುವ ಬದಲು ಅವರ ಮೇಲೆ ದೌರ್ಜನ್ಯ ನಡೆಸಿರುವ ಕೇಂದ್ರ ಸರಕಾರದ ನಡೆ ಖಂಡನಿಯ ವಾಗಿದ್ದು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ನೀಟ್ ಪರೀಕ್ಷೆ ಬರೆದ 22 ಜನ ಅಮಾಯಕ ವಿದ್ಯಾರ್ಥಿಗಳ ಸಾವಿಗೆ ಕಾರಣರಾದ ಶಿಕ್ಷಣ ಸಚಿವ ದರ್ಮೆಂದ್ರ ಪ್ರಧಾನ್ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು ಹಾಗೂ ನೀಟ್ ಪರೀಕ್ಷೆಯ ಸೋರಿಕೆಯ ಹಗರಣವನ್ನು ಗಂಭೀರವಾಗಿ ಪರಿಗಣಿಸಿರುವ ದೇಶದ ಪ್ರಧಾನಿ ನರೇಂದ್ರ ಮೋದಿ ಕೊಡಲೇ ಶಿಕ್ಷಣ ಸಚಿವರ ರಾಜೀನಾಮೆ ಪಡೆದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದು ವಿದ್ಯಾರ್ಥಿಗಳ ಆತ್ಮ ಹತ್ಯೆಯ ಸಾವುಗಳ ಜವಾಬ್ದಾರಿಯನ್ನು ಹೊತ್ತು ದೇಶದ ಪ್ರಜೆಗಳ ಮುಂದೆ ಕ್ಷಮೆ ಯಾಚಿಸಿ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಜಗದೀಶ್ ಗೌಡ ಮಾಲಿಪಾಟೀಲ್ , ಪ್ರಕಾಶ್ ಕುರಿ ಚಿತ್ತಾಪುರ , ಶಿವಾಜಿ ಕಟ್ಟಿಮನಿ , ಲಕ್ಷ್ಮಿ ಪೊಲೀಸ್ ಪಾಟೀಲ್ ಉಪ್ಪಾರ , ಭೂಪನ ಗೌಡ ಪಾಟೀಲ್ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ , ಪಾಮಯ್ಯ ಮುರಾರಿ ಜಿಲ್ಲಾ ಗ್ಯಾರೆಂಟಿ ಅ ಅಧ್ಯಕ್ಷ , ಜಿ. ಗುಂಡಪ್ಪ ನಾಯಕ್ , ಬಸವರಾಜ್ ಗೌಡ ಗಣೇಕಲ್ , ಹನುಮಂತಪ್ಪ ಕುಣೆಕಲ್ಲೂರ್ , ನಾಗರಾಜ್ , ಮೋಹನ್ ಗೊಸ್ಲೆ , ಶಶಿಧರ್ ಪಾಟೀಲ್ , ಡಿ ಜಿ ಗು–ರಿಕಾರ , ಅನಿಶ್ ಪಾಶ , ಇಬ್ರಾಹಿಂ ಗ್ಯಾರೆಂಟಿ , ಸೋಮಶೇಖರ್ , ಬಾಲಪ್ಪ ರಾಠೋಡ್ , ಮಲ್ಲಯ್ಯ , ಚಂದ್ರಕಾಂತ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಮತ್ತು ಎಲ್ಲ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದರು .

## ಜಂತರ್–ಮಂತರ್ ನಲ್ಲಿ ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡಿಸಿ, ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ

o ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನೀಟ್ ಪರೀಕ್ಷೆ ಅಕ್ರಮದ ವಿರುದ್ಧ ವಿದ್ಯಾರ್ಥಿ, ಯುವ ಜನರು ಜು.20ರಂದು ದೆಹಲಿಯ ಜಂತರ್–ಮಂತರ್ ನಲ್ಲಿ ಶಾಂತಿಯುತವಾಗಿ ಹಮ್ಮಿಕೊಂಡಿದ್ದ ಪಾರ್ಲಿಮೆಂಟ್ ಚಲೋ ಹೋರಾಟವನ್ನು ದಿಕ್ಕು ತಪ್ಪಿಸಲು ಕೇಂದ್ರ ಸರ್ಕಾರ ಪ್ರಯತ್ನಿಸಿದ್ದಲ್ಲದೇ,

ದುರುದ್ದೇಶದಿಂದ ಕೇಂದ್ರ ಗೃಹ ಇಲಾಖೆಯ ಆಣತಿಯಂತೆ ದೆಹಲಿ ಪೊಲೀಸರು ವಿದ್ಯಾರ್ಥಿ–ಯುವಜನರ ಮೇಲೆ ಲಾಠಿಚಾರ್ಜ್ ಮಾಡಿ ಅತ್ಯಂತ ಕ್ರೂರವಾಗಿ ಹಲ್ಲೆ ಮಾಡಿದ್ದನ್ನ ಖಂಡಿಸಿ ಜು.24 ಶುಕ್ರವಾರದಂದು ನಗರದ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದ ಪ್ರವಾಸಿ ಮಂದಿರದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ತಹಶೀಲ್ದಾರ್ ಕಚೇರಿಯವರೆಗೆ ಪ್ರತಿಭಟಿಸಿ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರಗತಿಪರ ಸಂಘಟನೆಯ ಮುಖಂಡ ಚಂದ್ರಶೇಖರ ಗೊರೇಬಾಳ ಮಾತನಾಡಿ, ಈ ದುರ್ಘಘಟನೆಯಲ್ಲಿ ನೂರಾರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಈ ದುಷ್ಕೃತ್ವವನ್ನು ಪ್ರಗತಿಪರ ಸಂಘಟನೆಗಳ ಒಕ್ಕೂಟವು ತೀವವಾಗಿ ಖಂಡಿಸುತ್ತದೆ. ಇಂತಹ ದುಷ್ಕೃತ್ಯಕ್ಕೆ ಕಾರಣ–ರಾದವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ನೀಟ್ ಪ್ರಶ್ನೆಪತ್ರಿಕೆ ಹಗರಣದಿಂದ ದೇಶದ 22 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ತೊಂದರೆಗೀಡಾಗಿ, 26 ಬಡ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರು ಕೇಂದ್ರ



ಸರ್ಕಾರ ಈ ಬಗ್ಗೆ ಕ್ಯಾರೇ ಎನ್ನದೇ, ಯಾವುದೇ ಕ್ರಮ ಕೈಗೊಳ್ಳದೇ, ಅತ್ಯಂತ ಬೇಜವಾಬ್ದಾ–ರಿಯಾಗಿ ನಡೆದು ಕೊಂಡಿದ್ದು ಖಂಡನೀಯ.

ಕೋಚಿಂಗ್ ಮಾಫಿಯಾದವರಿಗೆ ಪ್ರಶ್ನೆ ಪತ್ರಿಕೆಯನ್ನು ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡಲಾಗಿದ್ದು, ಇದು ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಅಕ್ಷರಶಃ ಮಾರಾಟ ದಂಧೆಯಾಗಿ ಮಾರ್ಪಟ್ಟಿದೆ. ಈ ಅಕ್ರಮದಿಂದಾಗಿ ವರ್ಷಗಟ್ಟಲೇ ಹಗಲಿರುಳು ಅಭ್ಯಾಸ ಮಾಡಿದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದು, ಅಭ್ಯಾಸದ ಬಗ್ಗೆ ಆತ್ಮವಿಶ್ವಾಸ ಮನೋಸ್ಥೈರ್ಯವನ್ನೇ ಕಳೆದುಕೊಂಡಿದ್ದಾರೆ. ನೀಟ್ ಅಕ್ರಮ ಬಯಲಾದ ನಂತರ ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕಾದ ಕೇಂದ್ರ ಸರ್ಕಾರ, ತೊಂದರೆಗೀಡಾದ ವಿದ್ಯಾರ್ಥಿಗಳ ಪರ ನ್ಯಾಯಕ್ಕಾಗಿ ಧ್ವನಿ ಎತ್ತಿ, ನೀಟ್ ಅಕ್ರಮವನ್ನು ಪ್ರಶ್ನಿಸಿದ ವಿದ್ಯಾರ್ಥಿ ಯುವಜನರ ಮೇಲೆಯೇ ಮಾರಣಾಂತಿಕ ಲಾಠಿ ಪ್ರಹಾರ ನಡೆಸಿದೆ.

ಈ ಲಾಠಿಪ್ರಹಾರವು ಕೇವಲ ವಿದ್ಯಾರ್ಥಿಗಳ ಮೇಲೆ ಮಾಡಿದ ದಾಳಿಯಷ್ಟೇ ಅಲ್ಲ, ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಮಾಡಿದ ಗದಾಪ್ರಹಾರವಾಗಿದೆ. ಹಾಗಾಗಿ ನೀಟ್ ಹಗರಣದ ಹೊಣೆ ಹೊತ್ತು ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ಕೂಡಲೇ ರಾಜೀನಾಮೆ ನೀಡಬೇಕು ಹಾಗೂ ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದ ದೆಹಲಿ ಹೋರಾಟಗಾರರ ಮೇಲೆ ದುರುದ್ದೇಶದಿಂದ ಅತ್ಯಂತ ಕ್ರೂರ ದಾಳಿ ನಡೆಯಲು ಕಾರಣರಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ನಂತರ ಹಿರಿಯ ಮುಖಂಡರು ಹಾಗೂ ಪತ್ರಕರ್ತರಾದ ಡಿ.ಎಚ್.ಕಂಬಳಿ ಮಾತನಾಡಿ, ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಟಿಎ) ಹಾಗೂ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಬೇಕು. ಶಿಕ್ಷಣದ ಬಹುಪಾಲು ಜವಾಬ್ದಾರಿ ಕೇಂದ್ರ ಸರ್ಕಾರವೇ ಹೊತ್ತಿದ್ದು, ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಿ ಸಿಇಟಿ ಮಾದರಿಯಲ್ಲಿ ವೈದ್ಯಕೀಯ, ಎಂಜಿನಿಯ–ರಿಂಗ್ ಮತ್ತಿತರೆ ಅರ್ಹತಾ ಪರೀಕ್ಷೆಗಳನ್ನು ಪಾರದರ್ಶಕವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಸಬೇಕು. ಎಲ್ಲರಿಗೂ ಸಮಾನ ಶಿಕ್ಷಣ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ತದನಂತರ ನಾಗರಾಜ ಪೂಜಾರ್, ಹುಸೇನ್ ಸಾಬ್, ಶಕುಂತಲಾ ಪಾಟೀಲ್, ಶರಣಪ್ಪ ಮರಳಿ, ಅಶೋಕ ನಂಜಲದಿನ್ನಿ, ಬಸವರಾಜ ನಾಯಕ, ವಿದ್ಯಾರ್ಥಿಗಳಾದ ಹೆಯಿಯಾ, ಆಫ್ರಿನ್, ಸೇರಿ ಅನೇಕರು ಮಾತನಾಡಿ, ನೀಟ್ ಹಗರಣದ ಹೊಣೆ ಹೊತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲೇಬೇಕು. ನವದೆಹಲಿಯಲ್ಲಿ ಹೋರಾಟ ನಿರತ ವಿದ್ಯಾರ್ಥಿಗಳ ಮೇಲೆ ನಡೆದ ಲಾಠಿಚಾರ್ಜ್ ಘಟನೆ ಸ್ವತಂತ್ರನ್ಯಾದ ತನಿಖೆಗೆ ಒಳಪಡಿಸಿ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಿ, ಶಾಂತಿಯುತವಾಗಿ ಹಕ್ಕಿನ ಹೋರಾಟ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ, ಉದ್ದೇಶ ಪೂರ್ವಕವಾಗಿ ದಿಕ್ಕು ತಪ್ಪಿಸಲು ಲಾಠಿಚಾರ್ಜ್ ನಡೆಸಿ, ಬೀಬತ್ಸ ಸೃಷಿಸಲು ಕಾರಣರಾದ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು.

ಎನ್‌ಟಿಎ ನೀಟ್ ರದ್ದುಗೊಳಿಸಿ, ರಾಜ್ಯ ಸರ್ಕಾರಗಳಿಗೆ ಅರ್ಹತಾ ಪರೀಕ್ಷೆಗಳನ್ನು ನಡೆಸಲು ಅಧಿಕಾರ ನೀಡಿ, ಇಂಜಿನಿಯರಿಂಗ್ ಮತ್ತಿತರೆ ಅರ್ಹತಾ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಂತೆ ಕ್ರಮ ಕೈಗೊಳ್ಳಬೇಕು. ನೀಟ್ ಹಗರಣದ ಅನ್ಯಾಯದಿಂದ ಮನನೊಂದು ಜೀವತೆತ್ತ ವಿದ್ಯಾರ್ಥಿಗಳ ಕುಟುಂಬಕ್ಕೆ ತಲಾ 1 ಕೋಟಿ ಪರಿಹಾರ ನೀಡಬೇಕು. ಪ್ರವೇಶ ಪರೀಕ್ಷೆಗಳು ಮತ್ತು ಉದ್ಯೋಗ ನೇಮಕಾತಿ ಪರೀಕ್ಷೆಗಳನ್ನು ನ್ಯಾಯಯುತ ಪಾರದರ್ಶಕವಾಗಿ ನಡೆಸಬೇಕು. ಖಾಸಗೀಕರಣ, ಕಾರ್ಪೊರೇಟೀಕರಣ ಮತ್ತು ಕೇಸರೀಕರಣವನ್ನು ತಡೆಗಟ್ಟಿ, ಸಮಾನ ಜಾರಿ ಗೊಳಿಸಬೇಕು ಎಂದು ಹಕ್ಕೋತ್ತಾಯ ಮಾಡಿ, ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸದೇ ಹೋದಲ್ಲಿ ವಿದ್ಯಾರ್ಥಿಗಳ ಹೋರಾಟ ಬೆಂಬಲಿಸಿ ಇಡೀ ದೇಶದಾದ್ಯಂತ ತೀವ್ರವಾಗುತ್ತಿರುವ ಹೋರಾಟಕ್ಕೆ ಕೇಂದ್ರ ಸರ್ಕಾರವೇ ನೇರಹೊಣೆಯನ್ನು ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಬೃಹತ್ ಪ್ರತಿಭಟನೆಯಲ್ಲಿ ಬಸವಂತರಾಯಗೌಡ ಕಲ್ಲೂರು, ಎಸ್. ದೇವೇಂದ್ರಗೌಡ, ಬಸವರಾಜ ಬಾದರ್ಲಿ, ಬಿ.ಎನ್.ಯರದಿಹಾಳ, ಶಂಕರ್ ಗುರಿಕಾರ್, ಡಾ.ವಸಿಂ ಅಹ್ಮದ್, ಅರುಣಕುಮಾರ ಬೇರ್ಗಿ, ಮಂಜುನಾಥ ಗಾಂಧಿನಗರ, ಸಂಗ್ರಾಮ ಕಿಲ್ಲೇದ್, ಎನ್.ರಾಮಯ್ಯ ಜವಳಗೇರಾ, ಅಬ್ದುಲ್ ಸಮದ್ ಚೌದ್ರಿ, ರಾಮಣ್ಣ ಬೇರ್ಗಿ, ಬಸವರಾಜ ಬೆಳಗುರ್ಕಿ, ಸೇರಿದಂತೆ ನಗರದ ಸೈನ್ಸ್ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

